ಸಿಸಿ ನಂಃ3407/2021
ಸಿ.ಡಬ್ಲೂ 1/ಪಿ.ಡಬ್ಲೂ 1

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 3407/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶ್ರಿದೇವಿ ಎ ಎಸ್ |
| ತಂದೆಯ ಹೆಸರು | ಃ | ಕಲ್ಮೇಶ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು |
| ವಾಸ ಸ್ಥಳ | ಃ | ಕಲಘಟಗಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **10-04-2026**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದಿಃ 02.08.2013 ರಿಂದ ದಿಃ 18.01.2016 ವರೆಗೆ ನನ್ನ ಮೂಲ ಹುದ್ದೆಯೊಂದಿಗೆ ಹಾಪಕಾಮ್ಸನ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು ಎಂದು ಕೆಲಸ ಮಾಡಿದ್ದೇನೆ.

ನ್ಯಾಯಾಲಯ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಅವರ ಪೈಕಿ 1 ನೇ ಆರೋಪಿ ಕಾರ್ಯದರ್ಶಿ ಇದ್ದು , 2 ನೇ ಆರೋಪಿ ಮಹಮ್ಮದ ಯೂನಿಸ್ ಬರ್ಚೆವಾಲೇ ಡಿ ದರ್ಜೆ ನೌಕರನಾಗಿದ್ದನು. ಪ್ರಭು ಕೇಶಗೌಂಡ ಇವರು ಸದರಿ ಹಾಪಕಾಮ್ಸನ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಸದರಿಯವರು ಈಗ ಜೀವಂತ ಇಲ್ಲ.

ನಾನು ಹಾಪಕಾಮ್ಸನ ಅಧಿಕಾರ ವಹಿಸಿಕೊಂಡು ಕಡತಗಳನ್ನು ಪರಿಶೀಲನೆ ಮಾಡಿದಾಗ ಹಿಂದಿನ ಆಡಳಿತ ಮಂಡಳಿ ದಿಃ 19.04.2012 ರಂದು ಠರಾವು ಪಾಸ್ ಮಾಡಿ ಸಂತೋಷ ಘೋರ್ಪಡೆ ಇವರನ್ನು ಶ್ರೀನಿಧಿ ಏಜೆನ್ಸಿಯಿಂದ ಗುತ್ತಿಗೆ ಆಧಾರದಲ್ಲಿ ಕಾರ್ಯದರ್ಶಿಯಾಗಿ ನೇಮಿಸಿಕೊಂಡಿದ್ದರು. ಸದರಿ ಸಂತೋಷ ಘೋರ್ಪಡೆ ಇವರು ದಿಃ 19.04.2012 ರ ಪ್ರಕಾರ ಸಂತೋಷ ಘೋರ್ಪಡೆ ಇವರೇ ಹಾಪಕಾಮ್ಸನ ದೈನಂದಿನ ಚಟುವಟಿಕೆ ಮತ್ತು

ವ್ಯವಹಾರಗಳನ್ನು ಹಾಗೂ ಹಣಕಾಸಿನ ಎಲ್ಲ ವ್ಯವಹಾರಗಳನ್ನು ನೊಡಿಕೊಳ್ಳಲು ಅಧಿಕಾರ ನೀಡಲಾಗಿತ್ತು.

ಹಾಪಕಾಮ್ಸಗೆ ಒಂದು ಆಡಳಿತ ಮಂಡಳಿ ಇದ್ದು ಅದರನ್ವಯ ಒಬ್ಬ ಅಧ್ಯಕ್ಷರು , 9 ಜನ ನಿರ್ದೇಶಕರು ಮತ್ತು ಪದನಿಮಿತ್ತ ವ್ಯವಸ್ಥಾಪಕರು ಎಂದು ಒಬ್ಬ ಅಧಿಕಾರಿ ಇರುತ್ತಾರೆ. ಸದರಿ ಸಂತೋಷ ಘೋರ್ಪಡೆ ಇವರು ದಿಃ 03.08.2015 ರಂದು ಸಂಘಕ್ಕೆ ಅನದಿಕೃತವಾಗಿ ಗೈರು ಹಾಜರಾದರು. ಸದರಿಯವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗಲೂ ಅವರು ನಮಗೆ ಲಭ್ಯವಾಗಲಿಲ್ಲ. ದೂರವಾಣಿಯಲ್ಲಿ ಸರ್ಪಕಿಸಿದಾಗ ಮರಾಠಿ ಬಾಷ್ಷೆಯಲ್ಲಿ ಪ್ರತ್ಯುತ್ತರ ಸಿಗುತ್ತಿತ್ತು. ಸದರಿಯವರು ವಾಸಿಸುತ್ತಿದ್ದ ಧಾರವಾಡದ ನೆಹರೂ ನಗರದಲ್ಲಿರುವ ಮನೆಯನ್ನು ಸಂಪರ್ಕಿಸಿದಾಗ ಸದರಿ ಮನೆಗೆ ಬೀಗ ಹಾಕಿರುವುದು ಕಂಡು ಬಂತು. ನಂತರದ ಅವಧಿಯಲ್ಲಿಯೂ ಸಹ ಸದರಿ ಸಂತೋಷ ಘೋರ್ಪಡೆ ನಮಗೆ ಲಭ್ಯವಾಗಲಿಲ್ಲ. ನಂತರದ ಸಂಘದ ಕಚೇರಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ ಕೆಲವೊಂದು ದಾಖಲಾತಿಗಳು ಲಭ್ಯವಿಲ್ಲದಿರುವುದು ಕಂಡು ಬಂತು. ಹಣದ ಬಟವಾಡೆ ವ್ಯವಹಾರದಲ್ಲಿ ಅವ್ಯವಹಾರ ಆಗಿರುವುದು ಕಂಡು ಬಂತು. ಈ ಹಿನ್ನಲೆಯಲ್ಲಿ ದಿಃ 13.08.2015 ರಂದು ಸಂಘದ ತುರ್ತು ಸಭೆಯನ್ನು ಕರೆದೆವು. ಸದರಿ ಸಭೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ನನಗೆ ಸದರಿ ಅವ್ಯವಹಾರಗಳ ಕುರಿತು ಕಾನೂನು ಪ್ರಕ್ರಿಯೆ ನಡೆಸುವಂತೆ ಅಧಿಕಾರ ನೀಡಲಾಯಿತು. ಅದರನ್ವಯ ದಿಃ 16.08.2015 ರಂದು ನಾನು ಮತ್ತು ಅಧ್ಯಕ್ಷ/ ಚಾಸಾ8 ಕೂಡಿಯೇ ಒಂದು ದೂರನ್ನು ನೀಡಿದೆವು.

ಸದರಿ ಸಂತೋಷ ಘೋರ್ಪಡೆ ಇವರು ರೂ.7956/- ರ ಮೊತ್ತವನ್ನು ಚೆಕ್ಕಿನಲ್ಲಿ ನಮೂದಿಸಿ ನನ್ನ ಹಾಗೂ ಚಾಸಾ8 ರವರ ಸಹಿಯನ್ನು ಪಡೆದು ನಂತರದಲ್ಲಿ ಅದನ್ನು ಬ್ಯಾಂಕಗೆ ಹಾಜರುಪಡಿಸುವಾಗ ಸದರಿ ಮೊತ್ತವನ್ನು ರೂ.70956/- ಎಂದು ತಿದ್ದುಪಡಿ ಮಾಡಿ

ಬ್ಯಾಂಕನಿಂದ ಹಣ ಪಡೆದುಕೊಂಡಿರುವುದು ಕಂಡು ಬಂತು. ಕಡತ ಪರಿಶೀಲಿಸಲಾಗಿ ಈ ರೀತಿಯ ಒಟ್ಟು 23 ಪ್ರಕರಣಗಳು ನಮಗೆ ಕಂಡು ಬಂದವು. ಸದರಿ ಚೆಕ್ಕುಗಳು ಸಂತೋಷ ಘೋರ್ಪಡೆ ಹಾಗೂ ಯೂನಿಸ ಬರ್ಚೆವಾಲೇ ಇವರ ಹೆಸರಿನಲ್ಲಿ ಇರುವುದು ಕಂಡು ಬಂತು. ವಾಸ್ತವವಾಗಿ ರೂ.146627/- ನ್ನು ಪಡೆಯಬೇಕಾಗಿದ್ದು ಅದರೇ ರೂ.1388627/- ಹಣ ಪಡೆದು ಸಂಘಕ್ಕೆ ರೂ.1242000/- ಮೋಸ ಹಾಗೂ ವಂಚನೆ ಮಾಡಿರುವುದು ಕಂಡು ಬಂತು.

ರೈತರ ಉಪಯೋಗಕ್ಕಾಗಿ ಕ್ರಿಮಿನಾಶಕ ಔಷಧಗಳ ವಿತರಕರಾದ T stains com.ltd ಇವರಿಂದ ಎಂ-45 ಹಾಗೂ ಮಾಕ್ಸಿಮೆಟ್ ಎನ್ನುವ ಜೌಷಧಗಳನ್ನು ತೆರೆಯಿಸಿ ರೈತರಿಗೆ ಸರಕಾರದ ಸಹಾಯಧನದೊಂದಿಗೆ ಪ್ರತಿ ಔಷಧಿಗೆ ಸರಕಾರದ ವಂತಿಗೆ ಶೇಕಡಾ 50 ಹಾಗೂ ರೈತರ ವಂತಿಗೆ ಶೇಕಡಾ 50 ರಂತೆ ನಾವು ವಿತರಿಸುತ್ತಿದ್ದೆವು. ರೈತರ ವಂತಿಗೆ ಹಣ ಸಂಗ್ರಹಿಸಿರುವುದನ್ನು ಸದರಿ ಸಂತೋಷ ಘೋರ್ಪಡೆ ನಮ್ಮ ಸಂಸ್ಥೆಗೆ ಕಟ್ಟದೇ ಒಟ್ಟು 34 ಪ್ರಕರಣಗಳಲ್ಲಿ ಅಂದಾಜು ರೂ.4,16,000/- ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವುದು ಕಂಡು ಬಂದಿರುತ್ತದೆ. ಇಬ್ಬರು ಆರೋಪಿತರು ನಮ್ಮ ಸಂಸ್ಥೆಗೆ ಒಟ್ಟು ರೂ.16,58,000/- ಹಣವನ್ನು ನಷ್ಟ ಉಂಟು ಮಾಡಿರುತ್ತಾರೆ.

ಈ ಕುರಿತು ದೂರನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿತರು ಮತ್ತು ಕಾರ್ಪೊರೇಷನ ಬ್ಯಾಂಕನ ಕ್ಯಾಶಿಯರ್ ಹಾಗೂ ಶ್ರೀನಿಧಿ ಎಜೆನ್ಸಿ ಇವರ ವಿರುದ್ಧ ನಾನು ಮತ್ತು ಚಾಸಾ8 ದೂರು ಕೊಟ್ಟೆವು.

ದಿಃ 17.08.2015 ರಂದು ಉಪನಗರ ಪೋಲಿಸ ಠಾಣೆಯವರು ಕೆಲವು ಮಾಹಿತಿ ಮತ್ತು ದಾಖಲೆಗಳನ್ನು ಕೋರಿ ಪತ್ರವನ್ನು ಬರೆದರು. ಅದಕ್ಕೆಪ್ರತಿಯಾಗಿ ದಿಃ 25.08.2015

ರಂದು ಪೋಲಿಸರು ಕೋರಿದ ಮಾಹಿತಿ ಮತ್ತು ದಾಖಲೆಗಳನ್ನು ಒಂದು ಪತ್ರದೊಂದಿಗೆ ಸಲ್ಲಿಸಿದೆನು.

ದಿಃ 04.12.2018 ರಂದು ಉಪನಗರ ಪೋಲಿಸ ಠಾಣೆಯ ಪೋಲಿಸರು ನಮ್ಮನ್ನು ಠಾಣೆಗೆ ಕರೆಯಿಸಿ ಕಾರ್ಪೊರೇಷನ ಬ್ಯಾಂಕ ನಗದು ಗುಮಾಸ್ತ ಮತ್ತು ಶ್ರೀನಿಧಿ ಏಜೆನ್ಸಿ ಇವರ ಹಣ ದುರ್ಬಳಕೆ ವಿಚಾರದಲ್ಲಿ ಅವರ ಪಾತ್ರ ಏನು ಇರುವುದಿಲ್ಲ ಎಂದು ಮನವರಿಕೆ ಮಾಡಿದ ಮೇರೆಗೆ ಈ ಕುರಿತು ಮರು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ತನ್ನ ದೂರು ಮತ್ತು ದೂರಿನಲ್ಲಿದ್ದ ಸಹಿಯನ್ನು ಗುರುತಿಸಿದ ಮೇರೆಗೆ ದೂರನ್ನು **ನಿಪಿ.1** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ರಲ್ಲಿ ಕಂಡು ಬರುವ ಚಾಸಾ8 ರವರ ಸಹಿಯನ್ನು ನೊಡಿ ಗುರುತಿಸಿರುತ್ತಾರೆ.

ಪೋಲಿಸರಿಗೆ ನೀಡಿದ ದಿಃ 25.08.2015 ರ ದಾಖಲೆಯನ್ನು **ನಿಪಿ.2** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.2 ರಲ್ಲಿ ಕಂಡು ಬರುವ ಚಾಸಾ8 ರವರ ಸಹಿಯನ್ನು ನೊಡಿ ಗುರುತಿಸಿರುತ್ತಾರೆ.

ಸಾಕ್ಷಿಯು ದಿಃ 19.04.2012 ರಂದು ಹಾಪಕಾಮ್ಸ ಆಡಳಿತ ಮಂಡಳಿಯವರ ಆಡಳಿತಾತ್ಮಕ ಮಂಜೂರಾತಿ ಪತ್ರ ಮತ್ತು ಸಭೆಯ ನಡುವಳಿ ಪತ್ರಗಳನ್ನು ನೊಡಿ ಗುರುತಿಸಿದ್ದು ಸಾಕ್ಷಿಯು ಗುರುತಿಸಿದ ದಾಖಲೆಗಳನ್ನು ಕ್ರಮವಾಗಿ **ನಿಪಿ.3 ಮತ್ತು 4** ಎಂದು ಗುರುತಿಸಲಾಯಿತು.

ಶ್ರೀನಿಧಿ ಏಜೆನ್ಸಿ ಇವರು ನೀಡಿದ ನೇಮಕಾತಿ ಆದೇಶ ಪತ್ರವನ್ನು ಗುರುತಿಸಿದ ಮೇರೆಗೆ **ನಿಪಿ.5** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ ಆರೋಪಿತರನ್ನು ನೊಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಅರುಣ ಜೋಶಿ ವಕೀಲರಿಂದ**

1 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಅವರ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎನ್ ಬಿ ಕೆ ವಕೀಲರಿಂದ**

2 ನೇ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.